2) ತಾಳಕೆರೆ ಗ್ರಾಮದ ಉದ್ದೇಶಿತ ಉಪ . ಕೇಂದ್ರ ಸ್ಥಾಪನೆ ಪರಿಶೀಲನೆಯಲ್ಲಿರುತ್ತದೆ.

ಶ್ರೀ ಸಿ.ಬಿ. ಸುರೇಶ್‌ಬಾಬು(ಶ್ರೀ ಎಂ.ಟಿ. ಕೃಷ್ಣಪ್ಪನವರ ಪರವಗಿ): ಮಾನ್ಯ ಅಧ್ಯಕ್ಷರೆ, ತುರುವೇಕೆರೆ ಕ್ಷೇತ್ರದ ಸೀಗೇಹಳ್ಳಿ, ತಂಡಗ, ತಾಳಕೆರೆ ಗ್ರಾಮಗಳಲ್ಲಿ 63 ಕೆ.ವಿ. ಉಪ ಸ್ಥಾವರ ಮಂಜೂರಾಗಿದ್ದು, ಇದುವರೆಗೂ ಕೆಲಸವಾಗಿಲ್ಲ. ದಯಮಾಡಿ, ಅದಕ್ಕೇನು ಕಾರಣವೆಂದು ಸನ್ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಕಾರಣ ಬೇಡ. ಈ ವರ್ಷದಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ. 18 ತಿಂಗಳುಗಳಲ್ಲಿ ತಂಡಗ ಮತ್ತು ತಾಳಕೆರೆ ಗ್ರಾಮಗಳ ಕೆಲಸ ಮುಗಿಸುತ್ತೇವೆ. ಸೀಗೆಹಳ್ಳಿ ಬಗ್ಗೆ technical study ಯನ್ನು ನಾವು ಮಾಡುತ್ತಿದ್ದೇವೆ. ಉಳಿದೆರಡು ಹಳ್ಳಿಗಳ ಕೆಲಸವನ್ನು 18 ತಿಂಗಳುಗಳಲ್ಲಿ ಕಾಮಗಾರಿಯನ್ನು ಚಾಲೂ ಮಾಡಿಸಿ ಮುಗಿಸಿಕೊಡುತ್ತೇವೆ.

ಶ್ರೀ ಸಿ.ಬಿ. ಸುರೇಶ್‌ಬಾಬು: ಕಾಮಗಾರಿ ಮಂಜೂರಾಗಿದೆ, ಅದನ್ನು ಆದಷ್ಟು ಶೀಘ್ರವಾಗಿ ಮುಗಿಸಿಕೊಡಿ ಎಂದು ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

ಬೇಲೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು.

39 (11) ಶ್ರೀ ರುದ್ರೇಶಗೌಡ.ವೈ.ಎನ್(ಬೇಲೂರು)
ಕು.ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರು)

ಅ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ, ಬಿಕ್ಕೋಡು ಹೋಬಳಿ ಹಾಗೂ ಗೆಂಡೇಹಳ್ಳಿ ಸುತ್ತ ಮುತ್ತ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಈ ಹೋಬಳಿ ಗ್ರಾಮಗಳಿಗೆ ಬೇಲೂರು ತಾಲ್ಲೂಕಿನ ಯಗಚಿ ಯೋಜನೆಯಿಂದ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗುವುದೇ;

ಇ) ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದೇ;

ಈ ದಿಸೆಯಲ್ಲಿ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವವಿರುವ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.

ಶ್ರೀ ವೈ.ಎನ್. ರುದ್ರೇಶಗೌಡ: ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ, ಈ ಮೂರು ಹೋಬಳಿ headquarters ಅಂದರೆ ಅರೇಹಳ್ಳಿ, ಗೆಂಡೇಹಳ್ಳಿ ಮತ್ತು ಬಿಕ್ಕೋಡುಗಳಲ್ಲಿ ಒಂದೊಂದು ಹೋಬಳಿ headquartersನಲ್ಲಿ 7–8 ಸಾವಿರ ಜನಸಂಖ್ಯೆ ಇದೆ.

12-00 PM

ಮೊದಲಿನಿಂದಲೂ ಕುಡಿಯುವ ನೀರಿಗೆ ತೊಂದರೆ ಇದೆ. ಇದು ಮಲೆನಾಡು ಪ್ರದೇಶವಾಗಿದೆ. ಇಲ್ಲಿ borewell ಕೊರೆದರೂ 500 ರಿಂದ 600 gallon ಮೇಲೆ ನೀರು ಬರುವುದಿಲ್ಲ. ಒಂದೊಂದು ಹೋಬಳಿ Headquarters ನಲ್ಲಿ 14 ರಿಂದ 15 motor ಗಳನ್ನು ಇಟ್ಟು ಹಳ್ಳಿಗಳಿಗೆ ನೀರನ್ನು ಸರಬರಾಜು ಮಾಡುತ್ತಿದ್ದಾರೆ. ಈ ಮೂರು ಹೋಬಳಿಗಳಲ್ಲಿ ವಾರಕ್ಕೆ ಒಂದು ದಿವಸ ನೀರು ಕೊಡುತ್ತಿದ್ದಾರೆ. ಆದ್ದರಿಂದ, ನಾನು ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಬೇಲೂರಿನಲ್ಲಿ ಯಗಚಿ ಡ್ಯಾಂ ಇದೆ, ಅಲ್ಲಿಂದ ಚಿಕ್ಕಮಗಳೂರು headquarters ಗೆ ನೀರು ಕೊಡಲಾಗುತ್ತಿದೆ, ಅರಸೀಕೆರೆಗೆ ನೀರು ಕೊಡಲಾಗುತ್ತಿದೆ, ಆಲೂರು ಮತ್ತು ಹಾಸನಕ್ಕೆ irrigation purpose ಗೆ ನೀರನ್ನು ಕೊಡಲಾಗುತ್ತಿದೆ. ಹಾಗಿದ್ದಮೇಲೆ, ನಮ್ಮ ಬೇಲೂರು ತಾಲ್ಲೂಕಿನ ಈ ಮೂರು ಹೋಬಳಿ headquartersಗೆ ನೀರನ್ನು ಕೊಡಬೇಕಾಗಿದೆ. ನಾನು ಹಳ್ಳಿಗಳಿಗೆ ನೀರು ಕೊಡಿ ಎಂದು ಕೇಳುತ್ತಿಲ್ಲ. ಅರೇಹಳ್ಳಿ, ಬಿಕ್ಕೋಡು, ಗೆಂಡೇಹಳ್ಳಿ ಈ ಮೂರು ಹೋಬಳಿ headquarters ಇವೆ. 7 ರಿಂದ 8 ಸಾವಿರ ಜನ ಒಂದೊಂದು ಹೋಬಳಿ headquarters ನಲ್ಲಿ ವಾಸವಾಗಿರುವುದರಿಂದ ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಯಗಚಿ ಡ್ಯಾಂನಿಂದ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಕು.ಶೋಭಾ ಕರಂದ್ಲಾಜೆ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಿ fluoride content ಇದೆ ಅಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಯೋಜನೆಯಿಂದ ನಾವು ನೀರನ್ನು ಕೊಡುತ್ತಿದ್ದೇವೆ. ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಹೆಚ್ಚು fluoride content ಇರುವುದು ಮತ್ತು ಚನ್ನರಾಯಪಟ್ಟಣ, ಹೊಳೆನರಸೀಪುರದಲ್ಲಿ fluoride content ಇದೆ. Fluoride content ಇದ್ದರೂ ಉಳಿದ ಯಾವುದೇ ಯೋಜನೆ ಮಾಡಬೇಕಾಗಿದ್ದರೂ ರಾಜ್ಯಸರ್ಕಾರದ ಹಣದಲ್ಲಿಯೇ ಮಾಡಬೇಕಾಗುತ್ತದೆ. ಇವತ್ತು ಬೇಲೂರು ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿರುವಂಥ 26 ಗ್ರಾಮಗಳಿಗೆ ನೀರು ಕೊಡುವ ಸಂದರ್ಭದಲ್ಲಿ ಬೇಲೂರು ತಾಲ್ಲೂಕಿನ en route villages ಆದ 22 ಗ್ರಾಮಗಳು ಏನು ಬರುತ್ತವೆ ಅದಕ್ಕೆ ಮೊನ್ನೆ ಶಿಲಾನ್ಯಾಸ ಮಾಡಿ ಬಂದಿದ್ದೇವೆ. ಕೆಲಸ ಆರಂಭವಾಗಿದೆ. ಆ 22 ಗ್ರಾಮಗಳಿಗೆ ನೀರು ಕೊಡುವ

ದೃಷ್ಟಿಯಿಂದ ಯೋಜನೆ ರೂಪಿಸಿದ್ದೇವೆ. ಉಳಿದಂಥ ತಾಲ್ಲೂಕಿನ ಇತರೆ ಬಾಗಗಳಲ್ಲಿ LPCD. . .

ಅಧ್ಯಕ್ಷರು: ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಮುಖ್ಯವಾಗಿ ಅರೇಹಳ್ಳಿ, ಗೆಂಡೇಹಳ್ಳಿ, ಬಿಕ್ಕೋಡು ಹೋಬಳಿಗಳಿಗೆ ಸಂಬಂಧಿಸಿದಂತೆ specific ಆಗಿ ಕೇಳಿದ್ದಾರೆ.

ಕು.ಶೋಭಾ ಕರಂದ್ಲಾಜೆ: ಅದೇ ಹೋಬಳಿಗಳಲ್ಲಿ ಬರುವಂಥ 22 ಗ್ರಾಮಗಳಿಗೆ ಯೋಜನೆ ರೂಪಿಸಿದ್ದೇವೆ.

ಅಧ್ಯಕ್ಷರು: ಇದರಲ್ಲಿ ಅವೆಲ್ಲ ಬರುತ್ತವೆಯೇ?

ಕು.ಶೋಭಾ ಕರಂದ್ಲಾಜೆ: ಹೌದು. ಉಳಿದ ಗ್ರಾಮಗಳಿಗೆ ಸಂಬಂಧಿಸಿದಂತೆ ಅವರೇನು ಪ್ರಶ್ನೆ ಕೇಳಿದ್ದಾರೆ, ಆ ಭಾಗಗಳಲ್ಲಿ ಕಬ್ಬಿಣಾಂಶ ಇರುವ ನೀರು ಹೆಚ್ಚು ಸಿಗುತ್ತದೆ. ಅದಕ್ಕಾಗಿ ಈಗಾಗಲೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಯಂತೆ paraffin filter ಅನ್ನು ಕೊಡುವ ಯೋಜನೆಯನ್ನು ಅವರಿಗೆ ಕೊಟ್ಟಿದ್ದೇವೆ. ಅವರು ಪ್ರಮುಖವಾಗಿ ಯಗಚಿ ಅಣೆಕಟ್ಟೆಯಿಂದ ನೀರನ್ನು ತರಬೇಕೆನ್ನುವ ಉದ್ದೇಶವಿಟ್ಟುಕೊಂಡು ಪ್ರಶ್ನೆ ಕೇಳಿದ್ದಾರೆ. ಆದರೆ, ನಿಮಗೆ ಗೊತ್ತಿರುವ ಹಾಗೆ ಇವತ್ತು ಯಗಚಿಯ capacity ಇರುವುದು 3.5 ಟಿಎಂಸಿ ನೀರು ಮಾತ್ರ, ಇದರಲ್ಲಿ cityಗೆ ಈಗಾಗಲೇ 0.3 ಟಿಎಂಸಿ ನೀರನ್ನು ಕೊಡುತ್ತಿದ್ದೇವೆ. ಉಳಿದಂಥ 3.2 ಟಿಎಂಸಿ ನೀರನ್ನು ಬೇರೆ ಬೇರೆ ಟ್ಯಾಂಕ್‌ಗಳಿಗೆ ತುಂಬಿಸಿದ್ದು ಅದು ನೀರಾವರಿ purpose ಗಾಗಿ ಸರಬರಾಜು ಆಗುತ್ತಿದೆ. ಅದಕ್ಕಾಗಿ ನಾವು ಜಲಸಂಪನ್ಮೂಲ ಇಲಾಖಾ ಸಚಿವರಿಗೆ ಮನವಿ ಮಾಡಿದ್ದೇವೆ. ಇವತ್ತು ನೀರಾವರಿ ಯೋಜನೆಗಾಗಿ ನೀರನ್ನು ಟ್ಯಾಂಕ್‌ಗೆ ತುಂಬಿಸಲಾಗುತ್ತಿದೆ, ಅದರಿಂದ ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ನಮಗೆ ನೀರನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಅವರು ಕೇಳಿದ ಈ ಎಲ್ಲಾ ಹಳ್ಳಿಗಳಿಗೆ ನೀರು ಕೊಡಬೇಕಾದರೆ 40 ಕೋಟಿ ರೂಪಾಯಿಗಳಷ್ಟು ಬೇಕಾಗುತ್ತದೆ. ಅದಕ್ಕಾಗಿ ಹಣ ಮತ್ತು ನೀರಿನ ಲಭ್ಯತೆ ನೋಡಿಕೊಂಡು ಈ ಊರುಗಳಿಗೆ ನೀರು ಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ವೈ.ಎನ್. ರುದ್ರೇಶಗೌಡ: ನಾನು ಹಳ್ಳಿಗಳಿಗೆ ನೀರು ಕೇಳುತ್ತಿಲ್ಲ. ಮೂರು ಹೋಬಳಿ headquarters ನೀರು ಕೊಡಿ ಎಂದು ಕೇಳುತ್ತಿದ್ದೇನೆ. ಈ ವಿಚಾರ ಏಕೆ ಹೇಳುತ್ತಿದ್ದೇನೆಂದರೆ, ನೀವು borewell statistics ತರಿಸಿ ನೋಡಿ, ಪ್ರತಿ borewell ನಲ್ಲಿ 600 ರಿಂದ 700 gallon ನೀರು ಮಾತ್ರ ಸಿಗುತ್ತಿದೆ. ಅದಕ್ಕೆ, ಶಾಶ್ವತವಾಗಿ ಕುಡಿಯುವ ನೀರು ಕೊಡುವ ಕರ್ತವ್ಯ ಸರ್ಕಾರದ್ದಾಗಿದೆ. ಆದ್ದರಿಂದ, ನಾನು ತಮ್ಮ ಗಮನ ಸೆಳೆಯುತ್ತೇನೆ. ಈ ಮೂರೂ ಹೋಬಳಿಗಳು ಹೆಚ್ಚು ದೂರ ಇಲ್ಲ. ಯಗಚಿ

ಡ್ಯಾಂ ನಿಂದ 10–12 ಕಿ.ಮೀ. ಅಂತರವಿದೆ. ಇದಕ್ಕೆ ಹೆಚ್ಚಿನ cost ಆಗುವುದಿಲ್ಲ. ಹೋಬಳಿ headquarters ನಲ್ಲಿ 7 ರಿಂದ 8 ಸಾವಿರ ಜನ ವಾಸವಾಗಿದ್ದಾರೆ. ಅದಕ್ಕೆ ಮಾತ್ರ ನೀರು ಕೊಡಿ ಎಂದು ಕೇಳುತ್ತಿದ್ದೇನೆ. ಸನ್ಮಾನ್ಯ ಮಂತ್ರಿಗಳು ಈ ಬಗ್ಗೆ estimate ಮಾಡಿಸಿ; ತರಿಸಿ ಸರ್ಕಾರದಿಂದ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಅವರು ಹೋಬಳಿ headquarters ಅಷ್ಟೇ ಕೇಳುತ್ತಿದ್ದಾರೆ. Specific answer ಕೊಡಿ.

ಕು.ಶೋಭಾ ಕರಂದ್ಲಾಜೆ: ಯಾವುದೇ headquartersಗೆ ನೀರು ಬರುವಾಗ ಯಾವುದಾದರೂ village ಮುಖಾಂತರವೇ ಆ ನೀರು ಹರಿದು ಬರಬೇಕು. ಆಗ ಎಲ್ಲಾ ಗ್ರಾಮದವರು en route village ಗೆ ನೀರು ಕೊಡಿ ಎಂದು ಕೇಳಿಯೇ ಕೇಳುತ್ತಾರೆ. ಅದಕ್ಕೆ ನಾನು 40 ಕೋಟಿ ರೂಪಾಯಿ ಬೇಕೆಂದು ಹೇಳಿದ್ದು. ನೀರಿನ ಮತ್ತು ಹಣಕಾಸಿನ ಲಭ್ಯತೆ ನೋಡಿಕೊಂಡು ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ರೂಪಿಸುತ್ತೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಬೇಲೂರು ತಾಲ್ಲೂಕಿನ. . .

ಅಧ್ಯಕ್ಷರು: ಬೇಡ, ಏಕೆಂದರೆ ಅವರು ಆ ಹೋಬಳಿಗೆ ಸೀಮಿತವಾಗಿ ಪ್ರಶ್ನೆ ಕೇಳಿದ್ದಾರೆ. ಈಗ ನೀವು ಕೇಳಿದರೆ ಮತ್ತೊಬ್ಬರು ಪ್ರಶ್ನೆ ಕೇಳುತ್ತಾರೆ. I will not allow it.

ರಾಜ್ಯದಲ್ಲಿ ಬರುವ ಗ್ರಾಮೀಣ ರಸ್ತೆಗಳ ವಿವರ ಕುರಿತು.

40 (309) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ)

ಕು. ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳ ಉದ್ದವೆಷ್ಟು; ಈ ರಸ್ತೆಗಳ ದುರಸ್ಥಿ / ನಿರ್ವಹಣೆಗಾಗಿ ಬಿಡುಗಡೆಯಾಗಿರುವ ಅನುದಾನವೆಷ್ಟು (ಕ್ಷೇತ್ರವಾರು ಮಾಹಿತಿಯನ್ನು ನೀಡುವುದು);

ರಾಜ್ಯದಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳ ಒಟ್ಟು ಉದ್ದ 1,47,212.36 ಕಿ.ಮೀ. ಇರುತ್ತದೆ. ಈ ರಸ್ತೆಗಳ ದುರಸ್ತಿ / ನಿರ್ವಹಣೆಗಾಗಿ ಪ್ರಸ್ತುತ ವರ್ಷದಲ್ಲಿ ಈ ಕೆಳಕಂಡ ಯೋಜನೆಗಳಡಿ ಹಂಚಿಕೆಯಾಗಿ ಬಿಡುಗಡೆಯಾಗಿರುವ ತಾಲ್ಲೂಕುವಾರು ಅನುದಾನ ಮಾಹಿತಿಯನ್ನು ಅನುಬಂಧ–1,2 ಮತ್ತು 3 ರಲ್ಲಿ ನೀಡಿದೆ.